2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**S.C.5037/2025**

| | |
|---|---|
| ಪಿರ್ಯಾದುದಾರ | ಕಲನಕಪುರ ಟೌನ್ ಪೊಲೀಸ್ ಠಾಣೆ |
| --ವಿರುದ್ಧ-- | |
| ಆರೋಪಿ | 1. ನವಾಜ್ ಖಾನ್.ಎಸ್.<br>2. ಶಬ್ಬೀರ್ ಖಾನ್<br>3. ರೇಷ್ಮಾ<br>4.ಅಬ್ಬು ಸುಲ್ತಾನ್ @ ಅಬ್ಬು ಖಾನ್ |

**ದೋಷಾರೋಪಣೆ**

ಶ್ರೀ ಕುಮಾರ್.ಹೆಚ್.ಎನ್., ಬಿ.ಎ.ಎಲ್., ಎಲ್‌ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ, ಆದ ನಾನು

| | | |
|---|---|---|
| ಆರೋಪಿ | 1 | ನವಾಜ್ ಖಾನ್.ಎಸ್.<br>ಬಿನ್ ಶಬ್ಬೀರ್ ಖಾನ್,<br>ವಯಸ್ಸು 29 ವರ್ಷ,<br>ವಾಸಃ-<br>ಕೇ/ಆಫ್ ನಾರಾಯಣಪ್ಪ,<br>2ನೇ ಅಡ್ಡರಸ್ತೆ,<br>ಕೆ.ಎಸ್.ಆರ್.ಟಿ.ಸಿ. ಗ್ಯಾರೇಜ್ ಹತ್ತಿರ,<br>ನವಾಜಿ ಬೋರೆ,<br>ಕನಕಪುರ ಟೌನ್,<br>ರಾಮನಗರ ಜಿಲ್ಲೆ. |
| | 2 | ಶಬ್ಬೀರ್ ಖಾನ್<br>ಲೇಟ್ ಹುಸೇನ್ ಖಾನ್,<br>ವಯಸ್ಸು 58 ವರ್ಷ,<br>ವಾಸಃ-<br>ನವಾಜಿ ಬೋರೆ ರಸ್ತೆ,<br>ಕನಕಪುರ ಟೌನ್,<br>ರಾಮನಗರ ಜಿಲ್ಲೆ. |

| | | |
|---|---|---|
| | 3 | ರೇಷ್ಮಾ<br>ಕೋಂ ಶಬ್ಬೀರ್ ಖಾನ್,<br>ವಯಸ್ಸು 45 ವರ್ಷ,<br>ವಾಸಃ-<br>ನವಾಜಿ ಬೋರೆ ರಸ್ತೆ,<br>ಕನಕಪುರ ಟೌನ್,<br>ರಾಮನಗರ ಜಿಲ್ಲೆ. |
| | 4 | ಅಬ್ಬುಸುಲ್ತಾನ್ @ ಅಬ್ಬು ಖಾನ್<br>ಬಿನ್ ಶಬ್ಬೀರ್ ಖಾನ್,<br>ವಯಸ್ಸು 28 ವರ್ಷ,<br>ನವಾಜಿ ಬೋರೆ ರಸ್ತೆ,<br>ಕನಕಪುರ ಟೌನ್,<br>ರಾಮನಗರ ಜಿಲ್ಲೆ. |

ಆದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ಮೃತೆ ಜಾಸ್ಮೀನ್ ತಾಜ್‌ರವರನ್ನು ದಿಃ09.07.2017ರಂದು ಕೋಲಾರ ಜಿಲ್ಲೆಯ, ಶ್ರೀನಿವಾಸಪುರ ಟೌನ್‌ನಲ್ಲಿರುವ ಕರ್ನಾಟಕ ಕಲ್ಯಾಣ ಮಂಟಪದಲ್ಲಿ ನೀವು ಆರೋಪಿ-1ರವರೊಂದಿಗೆ ಮೃತೆಯ ಕುಟುಂಬದವರು ಮದುವೆ ಮಾಡಿಕೊಟ್ಟಿದ್ದು, ಮದುವೆ ಸಮಯದಲ್ಲಿ ನೀವು ಆರೋಪಿ-1 ರವರಿಗೆ ವರದಕ್ಷಿಣೆಯಾಗಿ 15 ಗ್ರಾಂ ಚೈನ್, 15 ಗ್ರಾಂ ಬ್ರಾಸ್ ಲೆಟ್, 02 ಉಂಗುರ, ಒಂದು ಲಕ್ಷ ರೂಪಾಯಿ ಹಣ ಹಾಗೂ ಮೃತೆ ಜಾಸ್ಮೀನ್ ತಾಜ್‌ಳಿಗೆ 25 ಗ್ರಾಂ ನಕ್ಲೆಸ್, ಕಿವಿ ಓಲೆ ಮತ್ತು ಮಾಟಿ ಸೇರಿ 25 ಗ್ರಾಂ ಒಟ್ಟು 50 ಗ್ರಾಂ ತೂಕದ ಒಡವೆಗಳನ್ನು ಕೊಟ್ಟು ಮದುವೆ ಮಾಡಿಕೊಟ್ಟಿದ್ದು, ಆದರೂ ಸಹ ಕಳೆದ ಮೂರು ವರ್ಷಗಳಿಂದ ನೀವು ಆರೋಪಿ-1 ರಿಂದ 4ರವರು ಆರೋಪಿ-1ರವರು ಮಾಡಿದ್ದ ಸಾಲವನ್ನು ತೀರಿಸಿಕೊಳ್ಳಲು ಮೃತೆ ಜಾಸ್ಮೀನ್ ತಾಜ್‌ಗೆ ಆಕೆಯ ತವರು ಮನೆಯಿಂದ ಎರಡು ಲಕ್ಷ

ರೂಪಾಯಿಗಳ ಹೆಚ್ಚಿನ ವರದಕ್ಷಿಣೆ ಹಣ ತೆಗೆದುಕೊಂಡು ಬರುವಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿ ಕ್ರೌರ್ಯಕ್ಕೊಳಪಡಿಸಿ, ಆದ್ದರಿಂದ ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 85 ಸಹವಾಚಕ ಕಲಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ಮುಂದುವರೆದು ದಿಃ30.12.2024ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ನೀವು ಆರೋಪಿ-1 ರಿಂದ 4ರವರು ಮೃತೆ ಜಾಸ್ಮೀನ್ ತಾಜ್‌ಗೆ ಆಕೆಯ ತಾಯಿ ಮನೆಯಿಂದ ಎರಡು ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡು ಬರದಿದ್ದರೆ ಮನೆ ಬಿಟ್ಟು ಆಚೆಗೆ ಕಳುಹಿಸುತ್ತೇವೆ, ನೀನು ನೇಣು ಹಾಕಿಕೊಂಡು ಸಾಯಿ, ನೀನು ಇದ್ದರೂ ಒಂದೇ ಸತ್ತರೂ ಒಂದೇ ಎಂದು ಹೇಳಿ, ನೀವು ಆರೋಪಿ-3 ರವರು ಚಿನಾಲ್ ಮುಂಡೆ ಎಂದು ಬೈದು, ನೀವು ಆರೋಪಿ-2ರವರು ಕೈಯಿಂದ ಹೊಡೆದು, ನೀವು ಆರೋಪಿ-2 ಮತ್ತು 3ರವರು ಆಕೆಯ ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿ ಆಕೆ ನೇಣು ಹಾಕಿಕೊಂಡು ಸಾಯುವಂತೆ ಪ್ರಚೋದಿಸಿದ್ದರಿಂದ ಮೃತೆ ಜಾಸ್ಮೀನ್ ತಾಜ್‌ರವರು ದಿಃ31.12.2024ರಂದು ಬೆಳಗಿನ ಜಾವ 4-10 ಗಂಟೆ ಸಮಯದಲ್ಲಿ ಆಕೆಯು ಭೋಗ್ಯಕ್ಕೆ ವಾಸವಿದ್ದ ಚಾಸಾ-11ರವರಿಗೆ ಸೇರಿದ ಮನೆಯ ಒಳಭಾಗದ ಮಲಗುವ ಕೊಠಡಿಯಲ್ಲಿದ್ದ ಫ್ಯಾನ್‌ಗೆ ವೇಲ್‌ನಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಆದ್ದರಿಂದ ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 108 ಸಹವಾಚಕ ಕಲಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ಮುಂದುವರೆದು, ಆರೋಪಿ-1 ಹಾಗೂ ಮೃತೆ ಜಾಸ್ಮೀನ್ ತಾಜ್‌ರವರ ಮದುವೆ ಸಮಯದಲ್ಲಿ ನೀವು ಆರೋಪಿ-1ರವರ ಜೊತೆಗೆ ನೀವು ಆರೋಪಿ-2 ರಿಂದ 4ರವರು ಮೃತೆ ಜಾಸ್ಮೀನ್ ತಾಜ್‌ರವರ ತವರು ಮನೆಯಿಂದ 15 ಗ್ರಾಂ ಚೈನ್, 15 ಗ್ರಾಂ ಬ್ರಾಸ್ ಲೆಟ್, 02 ಉಂಗುರ, ಒಂದು ಲಕ್ಷ ರೂಪಾಯಿ ಹಣವನ್ನು ವರದಕ್ಷಿಣೆಯಾಗಿ ಪಡೆದು ಆ ಮೂಲಕ ವರದಕ್ಷಿಣೆ ನಿಷೇದ ಕಾಯ್ದೆ 3ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ನಾಲ್ಕನೆಯದಾಗಿ ನೀವು ಆರೋಪಿ-1 ರಿಂದ 4ರವರು ಮೃತೆ ಜಾಸ್ಮೀನ್ ತಾಜ್‌ರವರಿಗೆ ಆಕೆಯ ತವರು ಮನೆಯಿಂದ ಎರಡು ಲಕ್ಷ ರೂಪಾಯಿಗಳ ಹೆಚ್ಚಿನ ವರದಕ್ಷಿಣೆ ತರುವಂತೆ ಒತ್ತಾಯಿಸಿ A ಮೂಲಕ ವರದಕ್ಷಿಣೆ ನಿಷೇದ ಕಾಯ್ದೆ 4ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ಈ ಮೂಲಕ ಮೇಲಿನ ಆರೋಪಕ್ಕೆ ನಿಮ್ಮ ವಿಚಾರಣೆಯಾಗಬೇಕೆಂದು ನಿರ್ದೇಶಿಸುತ್ತೇನೆ.

(ಕುಮಾರ್.ಹೆಚ್.ಎನ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

ದಿಃ02.12.2025.